ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

C/o ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ

E-mail ID:icps.kar@gmail.com | Phone No: 080-22879381

ಸಂಖ್ಯೆ:ಕರಾಸಮರಸೊ/ಐಇಸಿ/ಕಕಪ್ರಾಅಮ/21/2020-21 | ದಿನಾಂಕ:17.08.2020

ಗೆ,

ಕಾರ್ಯದರ್ಶಿಗಳು,
ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ,
ಕಲಬುರ್ಗಿ.

ಮಾನ್ಯರೇ,

**ವಿಷಯ:** ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ವತಿಯಿಂದ ಮಕ್ಕಳ ರಕ್ಷಣೆ ಕುರಿತು ವ್ಯಾಪಕ ಪ್ರಚಾರ ನೀಡಲು 06 ಜಿಲ್ಲೆಗಳಿಗೆ Open air screening vehicles ವ್ಯವಸ್ಥೆಯನ್ನು ಕಲ್ಪಿಸುವುದರ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯು ನಿರ್ಲಕ್ಷ್ಯತೆಗೊಳಗಾದ, ಪರಿತ್ಯಜಿಸಲ್ಪಟ್ಟ, ದೌರ್ಜನ್ಯಕ್ಕೆ ಒಳಗಾದ, ಶೋಷಣೆಗೆ ಒಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿಗೆ ತಲುಪದಿರುವಂತೆ ತಡೆಯಲು ಹಾಗೂ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಮತ್ತು ಸಂಕಷ್ಟದಲ್ಲಿರುವ ಮಕ್ಕಳ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶವನ್ನು ಹೊಂದಿರುತ್ತದೆ. ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015 ಅನ್ವಯ ರಾಜ್ಯದಲ್ಲಿ ಮಕ್ಕಳ ಪಾಲನೆ, ಪೋಷಣೆ ಮತ್ತು ರಕ್ಷಣೆ ಕುರಿತಂತೆ ಜಿಲ್ಲೆಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಶೇಷ ದತ್ತು ಸಂಸ್ಥೆಗಳು, ಬಾಲಮಂದಿರ, ವೀಕ್ಷಣಾಲಯಗಳನ್ನು ಕಾರ್ಯನಿರ್ವಹಿಸುತ್ತಿದೆ.

ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015 ಯ ಸೆಕ್ಷನ್ (108)ರಂತೆ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಮತ್ತು ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ ಹಾಗೂ ಮಾದರಿ ನಿಯಮ ಮತ್ತು ಮಕ್ಕಳ ಹಕ್ಕುಗಳ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಅರಿವು ನೀಡಬೇಕಾಗಿರುತ್ತದೆ.

(ಎ) ಮಕ್ಕಳು, ಅವರ ಪೋಷಕರು, ತಂದೆ-ತಾಯಿ, ಸಾರ್ವಜನಿಕರಿಗೆ ಈ ಕಾಯ್ದೆಯಲ್ಲಿರುವ ಅವಕಾಶಗಳ ಕುರಿತು ಕಾಲಕಾಲಕ್ಕೆ ದೂರದರ್ಶನ, ರೇಡಿಯೋ ಮತ್ತು ಮುದ್ರಣ ಮಾಧ್ಯಮ ಸೇರಿದಂತೆ ಎಲ್ಲಾ ಮಾಧ್ಯಮಗಳ ಮೂಲಕ ವಿಸ್ತೃತವಾದ ಮಾಹಿತಿಯನ್ನು ಪ್ರಚಾರವನ್ನು ನೀಡುತ್ತಿರುಬೇಕು.

(ಬಿ) ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳಿಗೆ, ವ್ಯಕ್ತಿಗಳಿಗೆ ಈ ಕಾಯ್ದೆಯ ಸಮರ್ಪಕ ಜಾರಿಗಾಗಿ ಕಾಲಕಾಲಕ್ಕೆ ತರಬೇತಿಗಳನ್ನು ಏರ್ಪಡಿಸಬೇಕಾಗಿರುತ್ತದೆ.

ಮುಂದುವರೆದು ಮಕ್ಕಳ ರಕ್ಷಣೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಹಾಗೂ ತರಬೇತಿಗಳನ್ನು ಆಯೋಜಿಸಲು ಕೋವಿಡ್-19 ತುರ್ತು ಪರಿಸ್ಥಿತಿ ಇರುವ ಕಾರಣದಿಂದಾಗಿ ಸಾಮಾಜಿಕ ಅಂತರ ಕಾಯ್ದುಕೊಂಡು ಕಾರ್ಯಕ್ರಮಗಳನ್ನು & ತರಬೇತಿಗಳನ್ನು ಆಯೋಜಿಸಲು ಕಷ್ಟಕರವಾಗಿರುತ್ತದೆ. ಆದರೆ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದು ಶಾಸನಾತ್ಮಕ ಕರ್ತವ್ಯವಾಗಿರುವುದರಿಂದ ವಾಹನಗಳ ಮೂಲಕ ಅತಿ ಹೆಚ್ಚು ಸಾರ್ವಜನಿಕರ ಮನೆಯ ಬಾಗಿಲಿಗೆ(ಗ್ರಾಮಕ್ಕೆ) & ಮಕ್ಕಳಿಗೆ ರಕ್ಷಣೆಯ ವಿಷಯಗಳ ಕುರಿತು ಅರಿವು ನೀಡಬಹುದು, ಇದರಿಂದ ಮಕ್ಕಳ ರಕ್ಷಣೆ ಕಾರ್ಯ ಸುಗಮವಾಗಿ ನಡೆಯುವುದರಿಂದ ಮಕ್ಕಳ ಹಕ್ಕುಗಳನ್ನು ಕಾಪಾಡಲು ಸರಿಯಾದ ಸಮಯಕ್ಕೆ ಸೂಕ್ತ ವ್ಯವಸ್ಥೆಯನ್ನು ಮಕ್ಕಳಿಗೆ ಒದಗಿಸಬಹುದಾಗಿದೆ. ಕೋವಿಡ್-19 ಪರಿಸ್ಥಿತಿಯಿಂದ ನೇರ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ, ವಾಹನಗಳ ಮೂಲಕ ಯಾವುದೇ ಅರಿವು ಕಾರ್ಯಕ್ರಮಗಳು ಕುಂಠಿತವಾಗದಂತೆ ಮಾಹಿತಿಯನ್ನು ತಲುಪಿಸಲು ಸಹಕಾರಿಯಾಗುವುದರಿಂದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ವತಿಯಿಂದ ಓಪನ್ ಏರ್ ಸ್ಕ್ರೀನಿಂಗ್ (Open air screening vehicles)06 ವಾಹನಗಳನ್ನು ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

17.08.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

REDMI NOTE 8
AI QUAD CAMERA